# ಬೆಳ್ಳಿ ಬೆಳಕು ಹರಿಸಿದ 'ಜಾವೆಲಿನ್'

■ ಪ್ರವೀಣ ಕುಲಕರ್ಣಿ

ಅಮೆರಿಕದ ಯೂಜಿನ್‌ನಲ್ಲಿ ಇತ್ತೀಚೆಗೆ ನೀರಜ್ ಚೋಪ್ರಾ ಮಾಡಿದ ಸಾಧನೆಯಿಂದ ಇಡೀ ದೇಶವೇ ಪುಳಕಗೊಂಡಿದೆ. ಆ ಸಾಧನೆಗೆ ಐತಿಹಾಸಿಕ ಮಹತ್ವವಿದೆ. ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಭಾರತೀಯ ಕ್ರೀಡೆಗೆ ಚಿನ್ನದ ಹೊಳಪು ತುಂಬಿದ್ದ ಚೋಪ್ರಾ, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಯ ಬೆಳಕು ಹರಿಸಿದ್ದು ಸಣ್ಣ ಸಾಧನೆಯೇನಲ್ಲ. ಭಾರತದ 'ಜಾವೆಲಿನ್ ಮ್ಯಾನ್'ನ ಸ್ಥಿರವಾದ ಪ್ರದರ್ಶನ ಕ್ರೀಡಾ ಜಗತ್ತಿನ ಗಮನಸೆಳೆದಿದೆ. ವಿಶ್ವ ಅಥ್ಲೆಟಿಕ್ಸ್ ಕೂಟದಲ್ಲಿ ಚೋಪ್ರಾ ಅವರು ತೋರಿದ ಈ ಸಾಧನೆಯು ಭಾರತದ ಇದುವರೆಗಿನ ಸರ್ವಶ್ರೇಷ್ಠ ಪ್ರದರ್ಶನವಾಗಿ ದಾಖಲಾಗಿದೆ.

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚೋಪ್ರಾ ಅವರ ಸಾಧನೆಗಿಂತ ಮೊದಲು ಭಾರತ ಏಕೈಕ ಪದಕವನ್ನು ಗಳಿಸಿತ್ತು. ಎರಡು ದಶಕಗಳ ಹಿಂದೆ ಲಾಂಗ್‌ಜಂಪ್‌ನಲ್ಲಿ ಅಂಜು ಬಾಬಿ ಜಾರ್ಜ್ (ಪ್ಯಾರಿಸ್, 2003) ಕಂಚಿನ ಪದಕ ಜಯಿಸಿದ್ದರು. ಚೋಪ್ರಾ ಅವರು ಜಾವೆಲಿನ್ ಎಸೆತದಲ್ಲಿ ಬೆಳ್ಳಿ ಜಯಿಸಿದ್ದರಿಂದ ಆ ಸಾಧನೆ ಈಗ ಇನ್ನೂ ಉತ್ತಮಗೊಂಡಿದೆ. ವಿಶ್ವ ಅಥ್ಲೆಟಿಕ್ಸ್ ಕೂಟದಲ್ಲಿ ಪದಕ ಗೆದ್ದ ಭಾರತದ ಮೊದಲ ಪುರುಷ ಕ್ರೀಡಾಪಟು ಎಂಬ ಹಿರಿಮೆಯೂ ಅವರದಾಗಿದೆ.

ಚೋಪ್ರಾ ಅವರಿಗೆ ಈಗ 24 ವರ್ಷ. ಅವರು ತಮ್ಮ ಕ್ರೀಡಾಜೀವನದ ಉದ್ದಕ್ಕೂ ಸ್ಥಿರವಾದ ಪ್ರದರ್ಶನ ನೀಡುತ್ತಾ ಬಂದಿರುವುದು ತುಂಬಾ ವಿಶೇಷ. ವಿಶ್ವ ಕಿರಿಯರ ಚಾಂಪಿಯನ್‌ಷಿಪ್ (2016), ಏಷ್ಯನ್ ಚಾಂಪಿಯನ್‌ಷಿಪ್ (2017), ಕಾಮನ್‌ವೆಲ್ತ್ ಕೂಟ (2018), ಏಷ್ಯನ್ ಕ್ರೀಡಾಕೂಟ (2018) ಮತ್ತು ಒಲಿಂಪಿಕ್ ಕೂಟದಲ್ಲಿ (2021) ಅವರು ಚಿನ್ನದ ಫಸಲು ತೆಗೆದಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಇಷ್ಟೊಂದು ಪದಕಗಳನ್ನು ಹೆಕ್ಕಿ ತಂದಿದ್ದರೂ ಚೋಪ್ರಾ ಅವರ ಸಾಧನೆಯ ಹಸಿವು ಕಡಿಮೆಯಾಗಿಲ್ಲ. ಮುಂದಿನ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕದ ಬಣ್ಣವನ್ನು (ಬೆಳ್ಳಿಯಿಂದ ಹಳದಿಗೆ) ಬದಲಿಸುವ ಗುರಿಯನ್ನು ಬೇರೆ ಇಟ್ಟುಕೊಂಡಿದ್ದಾರೆ.

ಒಲಿಂಪಿಕ್ಸ್ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಅಥ್ಲೀಟ್ ಅಲ್ಲವೇ ಚೋಪ್ರಾ? ಹೀಗಾಗಿ ಪ್ರವಾಹೋಪಾದಿಯಲ್ಲಿ ಅವರಿಗೆ ಹಣ–ಕೀರ್ತಿ ಹರಿದುಬಂದಿತ್ತು. ನಿರೀಕ್ಷೆಗಳ ಮೂಟೆಯನ್ನು ಹೆಗಲ ಮೇಲೆ ಹೊತ್ತು, ಹಣ–ಕೀರ್ತಿ ತಲೆಗೇರದಂತೆ ಎಚ್ಚರ ವಹಿಸುತ್ತ ವಿಶ್ವ ಕೂಟದಲ್ಲಿ ಪದಕ ಬಾಚುವುದು ಸುಲಭವೇನಲ್ಲ. ಆದರೆ, ಚೋಪ್ರಾ ತಮ್ಮ ಗುರಿಯಿಂದ ಒಂದಿನಿತೂ ಲಕ್ಷ್ಯ ಬದಲಿಸಲಿಲ್ಲ. ಅಂಗಳದಲ್ಲಿ ಬೆವರು ಹರಿಸುವುದನ್ನೂ ಕಡಿಮೆ ಮಾಡಲಿಲ್ಲ. ಅದರ, ಪರಿಣಾಮವೇ ಯೂಜಿನ್‌ನಲ್ಲಿಯೂ ಅವರಿಂದ ತ್ರಿವರ್ಣಧ್ವಜ ಹಾರಾಡುವಂತಾಗಿದ್ದು.

ಹಾಗೆ ನೋಡಿದರೆ ಯೂಜಿನ್‌ನಲ್ಲಿ ಚೋಪ್ರಾ ಅವರ ಸಾಧನೆ ಟೋಕಿಯೊ ಸಾಧನೆಗಿಂತ ಉತ್ತಮವಾಗಿತ್ತು. ಟೋಕಿಯೊದಲ್ಲಿ ಅವರು 87.58 ಮೀಟರ್ಸ್ ದೂರ ಜಾವೆಲಿನ್ ಎಸೆದಿದ್ದರೆ, ಯೂಜಿನ್‌ನಲ್ಲಿ 88.13 ಮೀಟರ್ಸ್ ದೂರ ಎಸೆದಿದ್ದರು. ಆದರೆ, ಅವರ ಪ್ರತಿಸ್ಪರ್ಧಿ ಗ್ರೆನಡಾದ ಆ್ಯಂಡರ್ಸನ್ ಪೀಟರ್ಸ್ ಇನ್ನೂ ದೂರ ಎಸೆದಿದ್ದರಿಂದ ಚೋಪ್ರಾ ಅವರು ಬೆಳ್ಳಿ ಪದಕಕ್ಕೆ ತೃಪ್ತಿಪಡಬೇಕಾಯಿತು. ಕ್ರಿಕೆಟ್ ಅನ್ನು ಧರ್ಮವಾಗಿ, ಕ್ರಿಕೆಟ್ ತಾರೆಗಳನ್ನು ದೇವರುಗಳಾಗಿ ಆರಾಧಿಸುವ ದೇಶದಲ್ಲಿ ಫೀಲ್ಡ್ ಮತ್ತು ಟ್ರ್ಯಾಕ್‌ಗೆ ಗೌರವದ ಸ್ಥಾನವನ್ನು ತಂದುಕೊಟ್ಟ ಹಿರಿಮೆ ಚೋಪ್ರಾ ಅವರದ್ದು. ಈ 'ಜಾವೆಲಿನ್ ಮ್ಯಾನ್'ನ ಸಾಧನೆಯಿಂದಾಗಿ ಎಷ್ಟೋ ಯುವ ಪ್ರತಿಭೆಗಳು ಕ್ರೀಡೆಯತ್ತ ಮುಖ ಮಾಡುವಂತಾಗಿದೆ. ಕಷ್ಟಪಟ್ಟರೆ ಭಾರತೀಯ ಕ್ರೀಡಾಪಟುಗಳೂ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆಲ್ಲಬಹುದು ಎನ್ನುವುದಕ್ಕೆ ಈ ಅಥ್ಲೀಟ್ ಜ್ವಲಂತ ಸಾಕ್ಷಿ.

ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಕ್ಕಿ ಬೀಳುವುದು, ಪದಕವಿಲ್ಲದೆ ಬರಿಗೈಯಲ್ಲಿ ಮರಳುವುದು... ದೊಡ್ಡ ದೊಡ್ಡ ಕೂಟಗಳು ನಡೆದಾಗಲೆಲ್ಲ ಇಂತಹದ್ದೇ ಕಥೆಗಳು ದಾಖಲಾಗುತ್ತಿದ್ದ ಭಾರತೀಯ ಕ್ರೀಡಾರಂಗದ ಸಾಧನೆಯ ಪುಟದಲ್ಲಿ ಬೇರೆಯದೇ ಕಥೆ ಅರಳುವಂತೆ ಮಾಡಿದ್ದಾರೆ ಚೋಪ್ರಾ. 'ನಾನು ಒಲಿಂಪಿಕ್ ಚಾಂಪಿಯನ್ ಎಂಬ ಸಂಗತಿಯಿಂದ ಒತ್ತಡಕ್ಕೆ ಒಳಗಾಗಲಿಲ್ಲ. ಮೂರನೇ ಥ್ರೋ ನಂತರವೂ ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸವಿತ್ತು. ಅದರಲ್ಲಿ ಯಶಸ್ವಿಯಾದೆ. ಆದ್ದರಿಂದ ಬೆಳ್ಳಿ ಪದಕ ಒಲಿದಿದೆ. ಇದೊಂದು ಒಳ್ಳೆಯ ಅನುಭವ. ಮುಂದಿನ ಬಾರಿ ಪದಕದ ಬಣ್ಣವನ್ನು ಬದಲಿಸಲು ಯತ್ನಿಸುವೆ' ಎಂದೆನ್ನುವ ಚೋಪ್ರಾ ಅವರಿಗೆ ಇಡೀ ದೇಶದ ಪರವಾಗಿ ಒಂದು ಬೆಸ್ಟ್ ಆಫ್ ಲಕ್. ಸದ್ಯ ಗಾಯದಿಂದ ಬಳಲುತ್ತಿರುವ ಅವರು ಬಹುಬೇಗ ಗುಣವಾಗಲಿ, ಮತ್ತೆ ಫೀಲ್ಡ್‌ಗೆ ಇಳಿಯಲಿ ಎಂಬ ಹಾರೈಕೆಯೂ ಜತೆಗಿದೆ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65